I/6214/2022

ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇವಿಜಿ/ಸಿಆರ್ ಸಿ ಸು /2022-23 ದಿನಾಂಕ: 07.09.2022

**ಸುತ್ತೋಲೆ**

ವಿಷಯ: 2022-23 ನೇ ಶೈಕ್ಷಣಿಕ ವರ್ಷದಲ್ಲಿ “ಕಲಿಕಾ ಚೇತರಿಕೆ ಕಾರ್ಯಕ್ರಮ”ವನ್ನು ಶಾಲೆಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಎಸ್.ಎಸ್.ಕೆ ಕಛೇರಿ ಸುತ್ತೋಲೆ: ಎಸ್.ಎಸ್.ಕೆ/ಗು.ಖಾ/ನಲಿಕಲಿ/ಪಿ.ಎಂ.ಯು 2022-23 ದಿ: 30.07.2022

********

ಕೋವಿಡ್‌ನಿಂದಾಗಿ ಹಿಂದಿನ ಎರಡು ವರ್ಷಗಳಲ್ಲಿ ಶಾಲೆಗಳಲ್ಲಿ ವ್ಯವಸ್ಥಿತ ಬೋಧನಾ ಕಲಿಕಾ ಪ್ರಕ್ರಿಯೆಗಳ ಹಿನ್ನೆಡೆಯಿಂದಾಗಿ ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸಿ, ಮುಂದಿನ ಶೈಕ್ಷಣಿಕ ಪ್ರಕ್ರಿಯೆ ಸುಗಮಗೊಳಿಸಲು 1 ರಿಂದ 9 ನೇ ತರಗತಿಗಳ ವಿದ್ಯಾರ್ಥಿಗಳಿಗೆ **‘ಕಲಿಕಾ ಚೇತರಿಕೆ’** ಉಪಕ್ರಮವನ್ನು 2022-23 ನೇ ಶೈಕ್ಷಣಿಕ ವರ್ಷದಲ್ಲಿ ಅಳವಡಿಸಿದೆ.

ಜಿಲ್ಲೆಗಳಿಗೆ ಉಪಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ 47702 ಸರ್ಕಾರಿ ಶಾಲೆಗಳನ್ನು ರಾಜ್ಯ, ವಿಭಾಗೀಯ ಹಾಗೂ 34 ಜಿಲ್ಲೆಗಳಲ್ಲಿನ ವಿವಿಧ ಹಂತದ ಮೇಲುಸ್ತುವಾರಿ ಅಧಿಕಾರಿಗಳಿಗೆ ದತ್ತು ನೀಡುವ ಮುಖೇನ ನಿರಂತರ ಅನುಪಾಲನೆಗೆ ಕ್ರಮ ವಹಿಸಲು ಹಾಗೂ ಉಪಕ್ರಮದ ಆಶಯವನ್ನು ಈಡೇರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಉಲ್ಲೇಖಿತ ಸುತ್ತೋಲೆಯಲ್ಲಿ ನಿರ್ದೇಶನ ನೀಡಿದೆ.

ಈ ಹಿನ್ನೆಲೆಯಲ್ಲಿ ಉಪಕ್ರಮದ ಅನುಪಾಲನೆಗಾಗಿ ಈ ಕಛೇರಿಯ ಅಧಿಕಾರಿಗಳು ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿದಾಗ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

- ಉಲ್ಲೇಖಿತ ಸುತ್ತೋಲೆಯಂತೆ ಆಗಸ್ಟ್ 2022 ರ ಮಾಹೆಯನ್ನು ಪೋಷಕ ಹಾಗೂ ಭಾಗೀದಾರರ ಜಾಗೃತಿ ಮಾಹೆಯನ್ನಾಗಿ ಗುರುತಿಸಿರುವ ಕುರಿತು ಶಿಕ್ಷಕರು ಮತ್ತು ಮುಖ್ಯಶಿಕ್ಷಕರಿಗೆ ಅರಿವಿದ್ದು ಅದರಂತೆ ಕ್ರಮವಹಿಸುತ್ತಿರುವುದನ್ನು ಕೆಲವು ಜಿಲ್ಲೆಗಳಲ್ಲಿ ಗಮನಿಸಿದೆ.
- ಗದಗ ಜಿಲ್ಲೆಯಲ್ಲಿ ದತ್ತು ಶಾಲೆಗಳನ್ನು ಭೇಟಿ ಮಾಡುವುದರೊಂದಿಗೆ ಡಯಟ್ ಅಧಿಕಾರಿಗಳು ತಂಡದಲ್ಲಿ ಶಾಲೆಗಳಿಗೆ ಭೇಟಿ ನೀಡಿ ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಿರುವುದು ಶಿಕ್ಷಕರಲ್ಲಿ ಉತ್ಸಾಹವನ್ನು ಹೆಚ್ಚಿಸಿದೆ.
- ದಾವಣಗೆರೆ, ಶಿವಮೊಗ್ಗ, ತುಮಕೂರು, ಹಾಸನ ಹಾಗೂ ಚಿಕ್ಕೋಡಿ ಜಿಲ್ಲೆಗಳಲ್ಲಿ ಡಯಟ್ ಪ್ರಾಂಶುಪಾಲರು ಹಾಗೂ ಕಲಿಕಾ ಚೇತರಿಕೆ ನೋಡಲ್ ಅಧಿಕಾರಿಗಳು ಜಿಲ್ಲೆ ಹಾಗೂ ಬ್ಲಾಕ್ ಹಂತದ ಎಲ್ಲಾ ಅಧಿಕಾರಿಗಳಿಗೆ ಕಾಲಕಾಲಕ್ಕೆ ನಿರಂತರವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ಮುಖಾಮುಖಿಯಾಗಿ, ವೆಬಿನಾರ್ ಗಳ ಮೂಲಕ ನಡೆಸಿ, ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.
- ಉಪಕ್ರಮವನ್ನುಉತ್ತಮವಾಗಿ ಅರ್ಥೈಸಿಕೊಂಡು,ಅನುಷ್ಠಾನಿಸುತ್ತಿರುವ ತರಗತಿ ಪ್ರಕ್ರಿಯೆಯ ವಿಡಿಯೋಗಳನ್ನು ಸೃಜಿಸಿ ಸೋಷಿಯಲ್ ಮೀಡಿಯಾದಲ್ಲಿ ಹಾಸನ ಜಿಲ್ಲೆಯವರು ಹಂಚಿಕೊಳ್ಳುತ್ತಿದ್ದಾರೆ.
- ಶಿವಮೊಗ್ಗ ಜಿಲ್ಲೆಯಲ್ಲಿ ಉಪಕ್ರಮದ ವಿಷಯಗಳ ಕುರಿತು PODCAST ಮುಖೇನ ಶಿಕ್ಷಕರಿಗೆ ಮಾಹಿತಿ ಹಂಚಿಕೆ ಮಾಡುತ್ತಿರುವ ವಿಧಾನ ಉತ್ತಮವಾಗಿದೆ.
- ಜಿಲ್ಲಾ ಹಾಗೂ ಬ್ಲಾಕ್ ಹಂತದಲ್ಲಿ ಸಹಾಯವಾಣಿಯನ್ನು ಸ್ಥಾಪಿಸಿದ್ದರೂ, Whats app ಗ್ರೂಪ್ ಮುಖೇನ ಸಹಾಯವಾಣಿ ಸೌಲಭ್ಯವನ್ನು ಕಲ್ಪಿಸಿ, ನಿರಂತರವಾಗಿ ಶಿಕ್ಷಕರೊಂದಿಗೆ ಚರ್ಚಿಸುವ ಮೂಲಕ ಪರಿಹಾರಗಳನ್ನು ನೀಡುವ ವ್ಯವಸ್ಥೆಯು ಬೆಳಗಾಂ ಜಿಲ್ಲೆಯಲ್ಲಿ ಕಂಡುಬಂದಿದೆ.

ಮೇಲ್ಕಂಡ ಉತ್ತಮ ಅಂಶಗಳನ್ನು ಜಿಲ್ಲಾ ಭೇಟಿಯ ಸಂದರ್ಭದಲ್ಲಿ ಗಮನಿಸಿದ್ದರೂ, ಹೆಚ್ಚಿನ ಜಿಲ್ಲೆಗಳಲ್ಲಿ ಉಲ್ಲೇಖಿತ ಸುತ್ತೋಲೆಯಲ್ಲಿನ ಅಂಶಗಳನ್ನು ಅಳವಡಿಸದಿರುವುದು ಕಂಡುಬಂದಿದೆ. ಉಪಕ್ರಮದ ಆಶಯವನ್ನು ಈಡೇರಿಸಲು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ತಿಳಿಸಿದ್ದಾಗ್ಯೂ ವಿವಿಧ ಜಿಲ್ಲೆಗಳಲ್ಲಿ ಕಲಿಕಾ ಚೇತರಿಕೆ ತರಗತಿ ಪ್ರಕ್ರಿಯೆ ಮತ್ತು ಅನುಪಾಲನೆಯಲ್ಲಿ ಕಂಡುಬರುತ್ತಿರುವ ನ್ಯೂನತೆಗಳಿಗೆ ಆಯಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ಯವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಆದ್ದರಿಂದ ಸದರಿ ಅಧಿಕಾರಿಗಳು ಕೆಳಕಂಡ ಅಂಶಗಳ ಕುರಿತು ತುರ್ತಾಗಿ ಕ್ರಮಕೈಗೊಳ್ಳಲು ತಿಳಿಸಿದೆ.

- ಜಿಲ್ಲೆಗಳಲ್ಲಿ ಸಹಾಯವಾಣಿ ಕ್ರಮಬದ್ಧವಾಗಿ ನಿರ್ವಹಿಸದೇ ಇರುವುದನ್ನು ಗಮನಿಸಲಾಗಿದ್ದು,ಈ ಸಂಬಂಧ ಜಿಲ್ಲೆ ಹಾಗೂ ಬ್ಲಾಕ್ ಹಂತದಲ್ಲಿ ಸೂಕ್ತ ದಾಖಲೆ ನಿರ್ವಹಿಸಿ ಪ್ರತಿ 15 ದಿನಗಳಿಗೊಮ್ಮೆ ಸ್ವೀಕರಿಸಲಾಗುವ ಪ್ರಶ್ನೆಗಳಿಗೆ ಸೂಕ್ತವಾದ ಪರಿಹಾರ ನೀಡುವುದರೊಂದಿಗೆ FAQ ಗಳನ್ನು ಕ್ರೂಢೀಕರಿಸಿ ಡಯಟ್ Website ನಲ್ಲಿ upload ಮಾಡುವುದು ಹಾಗೂ ಡಿ.ಎಸ್.ಇ.ಆರ್.ಟಿ ಗೆ ಕಳುಹಿಸುವುದು.
- ಉಪಕ್ರಮದ ಯಶಸ್ಸಿಗೆ ಅತ್ಯಗತ್ಯವಾಗಿರುವ ಸಿ.ಆರ್.ಪಿ ಗಳ ಪ್ರಗತಿ ಪರಿಶೀಲನಾ ಸಭೆ ಜಿಲ್ಲಾ ಹಂತದಲ್ಲಿ ಪ್ರತಿ 15 ದಿನಗಳಿಗೊಮ್ಮೆ ನಡೆಸದೇ ಇರುವುದನ್ನು ಗಮನಿಸಲಾಗಿದೆ. ಈ ಕುರಿತು ಡಯಟ್ ಪ್ರಾಂಶುಪಾಲರು ಕ್ರಮವಹಿಸುವುದು.
- ತಾಲ್ಲೂಕು ಹಂತದಲ್ಲಿ ಬಿ.ಇ.ಓ ಮತ್ತು ಬಿ.ಆರ್.ಸಿಗಳು ಹಾಗೂ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ಗಳು ಪರಿಶೀಲನಾ ಸಭೆಗಳನ್ನು ಕ್ರಮಬದ್ಧವಾಗಿ ನಡೆಸಿಲ್ಲದಿರುವುದು ಗಮನಕ್ಕೆ ಬಂದಿದೆ. ಈ ಕುರಿತು ಉಪನಿರ್ದೇಶಕರು(ಆಡಳಿತ) , ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಬಿ.ಇ.ಓ ಮತ್ತು ಬಿ.ಆರ್.ಸಿ ಗಳು ಕ್ರಮವಹಿಸುವುದು.
- ಪ್ರೌಢಶಾಲೆಗಳಲ್ಲಿ ಕಲಿಕಾ ಚೇತರಿಕೆ ಉಪಕ್ರಮದ ತರಗತಿ ಪ್ರಕ್ರಿಯೆ,ಕೃತಿಸಂಪುಟಗಳ ನಿರ್ವಹಣೆ ಸೂಕ್ತವಾಗಿಲ್ಲದಿರುವುದನ್ನು ಗಮನಿಸಲಾಗಿದೆ. ಈ ಕುರಿತು ಡಯಟ್ ನವರು ನೇರವಾಗಿ ಪರಿಶೀಲನೆ ನಡಸಿ, ಸೂಕ್ತ ಬೆಂಬಲ ನೀಡುವುದು.
- ದತ್ತುಶಾಲೆ ಗಳಿಗೆ ಅಧಿಕಾರಿಗಳು ಭೇಟಿ ನೀಡದೇ ಇರುವುದನ್ನು ಹಾಗೂ ಭೇಟಿ ನೀಡಿದ ಅಧಿಕಾರಿಗಳು ಸೂಕ್ತ ಅನುಪಾಲನೆ ಮಾಡದೇ ಇರುವುದನ್ನು ಗಮನಿಸಲಾಗಿದೆ. ಉಪನಿರ್ದೇಶಕರು(ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರು ಈ ಕುರಿತು ಕ್ರಮ ವಹಿಸಿ ಪ್ರತಿ ಶಾಲೆಯಲ್ಲೂ ಆ ಶಾಲೆಯ ದತ್ತುಅಧಿಕಾರಿಯ ವಿವರವನ್ನು ನೋಟಿಸ್ ಬೋರ್ಡ್ ಮೇಲೆ ದಾಖಲಿಸುವಂತೆ ಕ್ರಮ ವಹಿಸುವುದು ಹಾಗೂ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ನಿರಂತರವಾಗಿ ಅನುಪಾಲನೆ ಮಾಡುವುದು.
- ದತ್ತು ಅಧಿಕಾರಿಗಳು ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ಹಂತಗಳ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಕಡ್ಡಾಯವಾಗಿ ಭಾಗವಹಿಸುವುದು.
- ಉಪನಿರ್ದೇಶಕರು(ಆಡಳಿತ) ರವರು ತಾವು ಭೇಟಿ ನೀಡಿದ ದತ್ತುಶಾಲೆಗಳಲ್ಲಿನ ಅನುಭವಗಳನ್ನು ಜಿಲ್ಲಾ ಪರಿಶೀಲನಾ ಸಭೆಗಳಲ್ಲಿ ಹಂಚಿಕೊಳ್ಳುವುದು.
- ಅಧಿಕಾರಿಗಳು ದತ್ತುಶಾಲೆಗಳಲ್ಲಿ ಕನಿಷ್ಠ ಅರ್ಧ ದಿನ ಹಾಜರಿದ್ದು, ತರಗತಿ ಪ್ರಕ್ರಿಯೆಯನ್ನು ವೀಕ್ಷಿಸಿ, ಸೂಕ್ತ TLM ಬಳಸಿ ಕಲಿಕಾಹಾಳೆಗಳನ್ನು ನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಂಡು, ಉತ್ತಮ ತರಗತಿ ಪ್ರಕ್ರಿಯೆ ನಡೆಯುವಂತೆ ಕ್ರಮವಹಿಸುವುದು. ತರಗತಿ ಪ್ರಕ್ರಿಯೆ ಅವಲೋಕಿಸಲು ವರ್ಷ ಪೂರ್ತಿ ತಮಗೆ ದತ್ತು ನೀಡಿರುವ ಶಾಲೆಗಳಿಗೆ ಮಾತ್ರ ನಿರಂತರವಾಗಿ ಭೇಟಿ ನೀಡವುದು.
- ಶಾಲೆಗಳಿಗೆ ಈ ಹಿಂದೆ ಭೇಟಿ ನೀಡಿದ ಅಧಿಕಾರಿಗಳು ಭೇಟಿ ವರದಿಯಲ್ಲಿ ದಾಖಲಿಸಿರುವ ನ್ಯೂನತೆಗಳ ಕುರಿತು ಅನುಪಾಲನೆ ಮಾಡಿ ಸೂಕ್ತ ಮಾರ್ಗದರ್ಶನ ನೀಡುವುದು.
- ಶಾಲೆಗಳಿಗೆ ಭೇಟಿ ನೀಡಿದಾಗ ಕಲಿಕಾ ಚೇತರಿಕೆ ಉಪಕ್ರಮದಡಿ ಸಿದ್ಧಡಿಸಿರುವ ಸಂದರ್ಶನ ನಮೂನೆ/MOBILE APP ನ್ನು ಬಳಸುವುದು.

ಈ ಸುತ್ತೋಲೆಯ ಮೇಲಿನ ಎಲ್ಲಾ ಅಂಶಗಳನು ಮನನ ಮಾಡಿಕೊಂಡು ಅಧಿಕಾರಿಗಳು, ಅನುಷ್ಠಾನಾಧಿಕಾರಿಗಳು ಹಾಗೂ ಶಿಕ್ಷಕರು ಉಪಕ್ರಮದ ಆಶಯವನ್ನು ಈಡೇರಿಸುವಂತೆ ಈ ಮೂಲಕ ತಿಳಿಸಿದೆ.

Signed by Sumangala V
Date: 09-09-2022 17:52:09

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.

2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.

I/6214/2022